## ಕಾಮಿಡಿ ಹೊಸ ಪ್ರಯೋಗ

ಝೀ ಕನ್ನಡದ ‘ಕಾಮಿಡಿ ಕಿಲಾಡಿಗಳು’ ಸೀಸನ್ ನಾಲ್ಕರ ರಂಗಪ್ರವೇಶವಾಗಿದೆ. ನಿಂತಲ್ಲೇ ನಿಂತು ನಗಿಸುವ ನಿಪುಣ ಮಾತುಗಾರ ರಾಯಚೂರಿನ ರಾಘವೇಂದ್ರ ಆಚಾರ್ ಹಾಗೂ ಯಕ್ಷಗಾನದ ವಿದೂಷಕ ಮಹಾಬಲೇಶ್ವರ ಭಟ್ ಅವರ ಆಯ್ಕೆ ವಿಶೇಷ ಎಂದೆನಿಸುತ್ತದೆ. ಅದೇ ಚರ್ವಿತಚರ್ವಣ, ಕುಡಿತ, ಹೊಡೆತ, ದ್ವಂದ್ವಾರ್ಥಗಳ ಆಚೆ ಪ್ರದರ್ಶಿಸಿದ ಹಾಸ್ಯಪ್ರಸಂಗಗಳು ಭೇಷ್ ಅನ್ನುವಂತಿದ್ದವು. ಇವರ ನಡೆ–ನುಡಿ, ಹಾಸ್ಯದಲ್ಲಿ ಸಕಾರಾತ್ಮಕ ಬೆಳವಣಿಗೆಯಾದರೆ ಒಳ್ಳೆಯದು.

—ವಾ. ಮುರಳೀಧರ, ತೀರ್ಥಹಳ್ಳಿ

## ಅಳುತ್ತಲೇ ಸಾಗುವ ‘ಅನು’ದಿನಗಳು

ಝೀ ಕನ್ನಡದ ‘ಜೊತೆ ಜೊತೆಯಲಿ’ಯ ನಾಯಕ ಅನಿರುದ್ಧ ಅವರ ನಿರ್ಗಮನ ಕಥೆಗೂ ಹೊಡೆತ ಬೀಳಬಹುದು ಎಂದುಕೊಳ್ಳುವ ಮೊದಲೇ ನಾಯಕನ ಮುಖವನ್ನೇ ಪ್ಲಾಸ್ಟಿಕ್ ಸರ್ಜರಿ ಮಾಡಿ ಕಥೆಯನ್ನ ತಿರುಚಿರುವುದು ಬಾಲಿಶವಾಗಿದೆ. ಇನ್ನು, ಅನು ಪಾತ್ರ ಮಾಡುತ್ತಿರುವ ಮೇಘಾ ಶೆಟ್ಟಿ ಪ್ರಾರಂಭದಿಂದಲೂ ಅಳುಮುಂಜಿಯಂತೆ ಕಾಣುತ್ತಿದ್ದಾರೆ. ಇತ್ತೀಚೆಗೆ ಅನು ತಾಯಿಯೂ ಇದರಲ್ಲಿ ಸೇರಿಕೊಂಡು ಜೊತೆ ಜೊತೆಯಲಿ ಗೋಳಾಡುತ್ತಾರೆ. ಈ ಧಾರಾವಾಹಿಯನ್ನು ಆದಷ್ಟೂ ಬೇಗ ಮುಗಿಸಲಿ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಆದ್ಯತೆಯೂ ಅತಿ ಆಗಬಾರದು

ವಂಶಿಕಾ ಕಶ್ಯಪ್ ಕಲರ್ಸ್ ಕನ್ನಡದ ‘ನಮ್ಮಮ್ಮ ಸೂಪರ್ ಸ್ಟಾರ್’ ರಿಯಾಲಿಟಿ ಶೋನಿಂದ ಬೆಳಕಿಗೆ ಬಂದ ಪುಟಾಣಿ. ವಯಸ್ಸಿಗೆ ಮೀರಿದ ಪ್ರತಿಭಾವಂತೆ. ಆ ಶೋನಲ್ಲಿ ಗೆಲುವು ಪಡೆದ ನಂತರ ‘ಗಿಚ್ಚಿ ಗಿಲಿ ಗಿಲಿ’ ಹಾಸ್ಯದ ರಿಯಾಲಿಟಿ ಶೋನಲ್ಲಿ ಕಾಣಿಸಿಕೊಡಳು. ಚಿಕ್ಕ ಹುಡುಗಿಯ ಬಾಯಲ್ಲಿ ಡಬ್ಬಲ್ ಮೀನಿಂಗ್ ಡೈಲಾಗ್ ಹೇಳಿಸಿದರು. ಅಲ್ಲಿಯೂ ಅವಳಿಗೆ ಗೆಲುವು ಒಲಿದುಬಂತು. ಈಗ ‘ನಮ್ಮಮ್ಮ ಸೂಪರ್ ಸ್ಟಾರ್ 2’ರಲ್ಲಿ ವಂಶಿಕಾ ನಿರೂಪಕಿ ಎಂದು ಪ್ರೊಮೊ ಬರುತ್ತಿದೆ. ಮಕ್ಕಳ ಪ್ರತಿಭೆ ಅನಾವರಣ ಆಗಬೇಕು, ಅದು ಅತಿ ಆಗಬಾರದು.

—ಮೇಘನಾ ರಘುನಂದನ್, ಹೂವಿನ ಹಡಗಲಿ

### ವಾರದ ಪತ್ರ

## ಕಿರುಪರಿಚಯ ಬೇಕಿತ್ತು

ವಿಜಯ ದಶಮಿಯಂದು ಮೈಸೂರು ದಸರಾ ಮೆರವಣಿಗೆಯನ್ನು ಚಂದನದಲ್ಲಿ ನೇರ ಪ್ರಸಾರ ಮಾಡಲಾಯಿತು. ರಾಜ್ಯದ ವಿವಿಧ ಜಿಲ್ಲೆಗಳ ಸಾಂಸ್ಕೃತಿಕ ತಂಡಗಳು ತಮ್ಮ ಪ್ರತಿಭೆಯನ್ನು ಮೆರೆದವು. ಡೊಳ್ಳು ಕುಣಿತ, ಜಗ್ಗಲಿಗೆ, ಕಂಸಾಳೆ... ಅನೇಕ ಪ್ರಕಾರದ ಜಾನಪದ ಕಲಾವಿದರು ತಮ್ಮ ನೈಪುಣ್ಯದ ನೃತ್ಯಗಳನ್ನು ಮಾಡುತ್ತಾ ಸಾಗಿದವು. ಆಯಾ ನೃತ್ಯ ತಂಡಗಳು ಕ್ಯಾಮೆರಾ ಮುಂದೆ ಹಾದು ಹೋದಾಗ ಆ ಕಲೆಯ ಪ್ರಕಾರ, ಪ್ರಾದೇಶಿಕತೆಯ ಬಗ್ಗೆ ದೂರದರ್ಶನ ವೀಕ್ಷಕರಿಗೆ ಕಿರುಪರಿಚಯವನ್ನಾದರೂ ನೀಡಬೇಕಿತ್ತು. ಆದರೆ ಚಂದನದ ವೀಕ್ಷಕ ವಿವರಣೆಗಾರರು, ಮೆರವಣಿಗೆಗೆ ಸಂಬಂಧವೇ ಇಲ್ಲದ ವಿಷಯಗಳ ಬಗ್ಗೆ ಮಾತನಾಡುತ್ತಾ ನೋಡುಗರ ದಿಕ್ಕು ಕೆಡಿಸಿದರು.

—ರಾಮಚಂದ್ರ ಎಂ.ಆರ್., ಬೆಂಗಳೂರು

## ಚರಿತ್ರೆಗೆ ಕಲ್ಪನೆ ಬೆರೆಸಬೇಡಿ

ಕಲರ್ಸ್ ಕನ್ನಡದ ‘ದಾಸ ಪುರಂದರ’ ಒಳ್ಳೆಯ ಧಾರಾವಾಹಿ. ಇದು ಪುರಂದರದಾಸರ ಬಗ್ಗೆ ಸಮಗ್ರ ಮಾಹಿತಿಯನ್ನು ನೀಡುತ್ತದೆ. ಚಾರಿತ್ರಿಕ ವಿಷಯಕ್ಕೆ ಕಾಲ್ಪನಿಕ ಅಂಶಗಳನ್ನು ಸೇರಿಸಿ ಎಳೆಯುವ ಪ್ರಯತ್ನವೂ ಕಾಣಿಸುತ್ತದೆ. ಬೇಸರದ ಸಂಗತಿ ಏನೆಂದರೆ, ಸರಸ್ವತಿಯ ತಂದೆಯ ಪಾತ್ರಕ್ಕೆ ಗಾಂಭೀರ್ಯತೆ ಇಲ್ಲದೇ ಇರುವುದು. ದೊಡ್ಡ ನಟರನ್ನು ವಿದೂಷಕರಂತೆ ಚಿತ್ರಿಸುವುದು ಸರಿ ಕಾಣಿಸುವುದಿಲ್ಲ.

—ಚಂದ್ರಿಕಾ, ದಾವಣಗೆರೆ

## ಅದ್ಭುತ ಮೇಕಪ್

ಕಲರ್ಸ್ ಕನ್ನಡದ ‘ರಾಮಾಚಾರಿ’ ವೀಕ್ಷಕರ ಮನಗೆದ್ದಿದೆ. ಆದರೆ, ಇತ್ತೀಚಿನ ಕೆಲವು ಎಪಿಸೋಡ್‌ಗಳು ಸಹಜತೆಗೆ ಬಹಳ ದೂರವಾಗಿದ್ದು ವೀಕ್ಷಕರು ನಗುವಂತಾಗಿದೆ. ಆಫೀಸ್ ಕೆಲಸ ಮುಗಿಸಿ ರಾಮಾಚಾರಿ ಚಿತ್ರದುರ್ಗ ಕೋಟೆಗೆ ಹೋಗುತ್ತಾನೆ. ಅದೇ ಸಮಯದಲ್ಲಿ ಚಾರುಲತಾ ಸಹ ಅಲ್ಲಿಗೆ ಹೋಗುತ್ತಾಳೆ. ಎಂದಿನಂತೆ ರಾಮಾಚಾರಿ ಮತ್ತು ಚಾರುಲತಾ ನಡುವೆ ಜಗಳ ಪ್ರಾರಂಭವಾಗುತ್ತದೆ. ರಾಮಾಚಾರಿಯ ತಲೆಯ ಮೇಲೆ ಕಲ್ಲು ಎತ್ತಿಹಾಕಿ ಕೊಲ್ಲುವ ಪ್ರಯತ್ನದಲ್ಲಿ ಚಾರುಲತಾ ಪ್ರಪಾತಕ್ಕೆ ಬೀಳುವುದನ್ನು ಹಲವು ಸೆಕೆಂಡ್ ತೋರಿಸುತ್ತಾರೆ. ಚಾರುಲತಾಳನ್ನು ರಕ್ಷಿಸಲು ರಾಮಾಚಾರಿ ಕೈ ಚಾಚುತ್ತಾನೆ. ಆ ಪ್ರಯತ್ನದಲ್ಲಿ ಮರದ ಬಿಳಲುಗಳು ತುಂಡಾಗಿ ಅಮೆಜಾನ್ ಕಾಡನ್ನು ನೆನಪಿಸುವಷ್ಟು ದಟ್ಟ ಅರಣ್ಯದೊಳಗೆ ಬೀಳುತ್ತಾರೆ. ಆದರೂ ಸಹ ಅವರಿಬ್ಬರಿಗೂ ಯಾವುದೇ ರೀತಿಯ ತರಚು ಗಾಯಗಳಾಗದಿರುವುದಯ, ಮೇಕಪ್ ಹಾಳಾಗದಿರುವುದು ಅದ್ಭುತವೇ ಸರಿ.

—ಜಿ. ನಾಗೇಂದ್ರ ಕಾವೂರು, ಸಂಡೂರು

ಧಾರಾವಾಹಿಗಳಿಗೆ ಸಿನಿಮಾದಂತಹ ಬಿಲ್ಡಪ್ ಕೊಡುತ್ತಿರುವುದನ್ನು ‘ರಾಮಾಚಾರಿ’ ನೋಡಿ ಕಲಿಯಬೇಕು. ಲಕ್ಷಣವಾಗಿ ಬೇಗ ಕಥೆಯನ್ನು ಮುಗಿಸುವುದು ಸೂಕ್ತ ಎಂದು ಅನಿಸುತ್ತದೆ. ಬಾಸ್ ಪಾತ್ರ ಅನುಚಿತವಾಗಿದೆ.

—ಪ್ರಕಾಶ್ ಮಲ್ಕಿ ಒಡೆಯರ್, ಹೂವಿನ ಹಡಗಲಿ

## ಹೌದು ಸ್ವಾಮಿ, ಇದು ಬಿಗ್ ಬಾಸ್

‘ಬಿಗ್ ಬಾಸ್’ ಶೋ ಶುರುವಾದಾಗ ಅದೊಂಥರ ವಿಭಿನ್ನ ಅನ್ನಿಸಿತ್ತು. ನಿರೂಪಕ ಸುದೀಪ್ ಅವರ ಮಾತುಗಳು ಶೋಗೆ ಮತ್ತಷ್ಟು ಮೆರುಗು ತುಂಬಿದ್ದವು. ಇದೀಗ, ‘ಕಲರ್ಸ್ ಕನ್ನಡ’ ವಾಹಿನಿಯಲ್ಲಿ ಬಿಗ್ ಬಾಸ್ ಸೀಸನ್ 9ಕ್ಕೆ ಬಂದಿದೆ. ಇಲ್ಲಿ ವಿಭಿನ್ನ ಹಿನ್ನೆಲೆಯ ಪ್ರತಿಭಾವಂತರು ಸಂತೆಯಲ್ಲಿ ಸೇರಿದಂತೆ ಗೋಚರಿಸುತ್ತಿದ್ದಾರೆ. ವಿವಾದಗಳಿಗೆ ತುತ್ತಾದವರಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದಾರೆ. ಪ್ರತೀ ಸೀಸನ್‌ನಲ್ಲೂ ಒಬ್ಬ ಗುರೂಜಿ, ಥಳಕು ಬಳುಕಿನ ಹೆಣ್ಮಕ್ಕಳ ಪೆದ್ದುತನ, ಸ್ವಾರ್ಥ ಮತ್ತು ತೋರಿಕೆಯ ಪ್ರಬುದ್ಧತೆ ಪ್ರದರ್ಶಿಸುವ ನಟರ ಆಟ ನೋಡಿದರೆ ಹುಚ್ಚರ ಸಂತೆ ಎಂದೇ ಅನ್ನಿಸುತ್ತದೆ.

ಬಿಗ್ ಬಾಸ್ ಮನೆ ಒಂದು ಸಣ್ಣ ಮಾಯಾನಗರಿ. ಇಲ್ಲಿನ ಸ್ಪರ್ಧಿಗಳು ಮನೆಯಲ್ಲಿ ನೆಲೆಗೊಳ್ಳಲು ಆಡದ ಆಟಗಳೇ ಇಲ್ಲ. ಮಾನವೀಯ ಮೌಲ್ಯಗಳು ಹಾಗೂ ಮನುಕುಲದ ಸಂಬಂಧಗಳನ್ನೇ ಪಣಕ್ಕಿಡುವಂತಹ ರಾಜಕೀಯ ಇಲ್ಲಿ ರಾರಾಜಿಸುತ್ತದೆ. ಇಲ್ಲಿ ಆಟ ಬಲ್ಲವನಿಗೆ ಮಾತ್ರ ಜಾಗ, ಇಲ್ಲವಾದಲ್ಲಿ ಗೇಟ್‌ಪಾಸ್ ಎನ್ನುವುದನ್ನು ತೋರಿಸುತ್ತಾರೆ. ಕೆಲವೊಮ್ಮೆ ಈ ಲೋಕಕ್ಕೂ ನೈಜ ಸಮಾಜಕ್ಕೂ ಏನಾದರೂ ವ್ಯತ್ಯಾಸ ಇದೆಯೇ ಎಂದು ಅನುಮಾನ ಬರುತ್ತದೆ. ಏನೇ ನಾಟಕ ಆಡಿದರೂ ಒಂದಿಲ್ಲೊಂದು ಸಂದರ್ಭದಲ್ಲಿ ಅವರ ನಿಜವಾದ ಮುಖವಾಡ ಕಳಚಿಬೀಳುವುದರಲ್ಲಿ ಸಂಶಯವಿಲ್ಲ.

ಟಾಸ್ಕ್‌ಗಳ ಮೂಲಕ ಒಬ್ಬ ಸ್ಪರ್ಧಿಯ ತಾಳ್ಮೆ ಹಾಗೂ ಮಾನಸಿಕ ದೃಢತೆಯನ್ನು ಒರೆಗೆ ಹಚ್ಚಲಾಗುತ್ತದೆ. ಸ್ಪರ್ಧಿಗಳ ದಿನಚರಿಯನ್ನು ಬಿಗ್ ಬಾಸ್ ತನ್ನ ಕ್ಯಾಮೆರಾ ಕಣ್ಣುಗಳಿಂದ ಗಮನಿಸುವಂತೆ, ಈ ಜಗತ್ತಿನ ಸಮಸ್ತ ಜನರನ್ನೂ ಭಗವಂತನೆಂಬ ‘ಬಿಗ್ ಬಾಸ್’ ಅವಲೋಕಿಸುತ್ತಿರುತ್ತಾನೆ ಎಂಬುದನ್ನು ಮನದಲ್ಲಿಟ್ಟುಕೊಂಡು ಎಲ್ಲರೂ ತಮ್ಮ ಆತ್ಮಸಾಕ್ಷಿಗೆ ವಂಚಿಸದೆ ನಡೆದುಕೊಳ್ಳಬೇಕು.

—ಧಾರಿಣಿ ಮಾಯಾ

‘ಬಿಗ್ ಬಾಸ್’ ಮತ್ತೆ ಶುರುವಾಗಿದೆ. ಎಲ್ಲ ಭಾಷೆಯಲ್ಲೂ ಇದೇ ರೀತಿಯ ಕಾರ್ಯಕ್ರಮ ಬರುತ್ತವೆ. ಮೂರ್ನಾಲ್ಕು ದಶಕಗಳ ಹಿಂದೆ ಬೀದಿ ಕೊಳಾಯಿಯ ನೀರು ಹಿಡಿಯಲು ಬರುವವರ ಕಚ್ಚಾಟ ನೋಡುತ್ತಿದ್ದೆವು. ಅದರ ಪ್ರತಿಬಿಂಬದಂತೆ ಈ ರಿಯಾಲಿಟಿ ಶೋ ನೋಡಬಹುದು. ಪುಕ್ಕಟೆ ಅಲ್ಲದಿದ್ದರೂ ಕೇಬಲ್, ಕರೆಂಟ್ ಬಿಲ್ ಜೊತೆ ಸಮಯವನ್ನು ಕೊಟ್ಟು ಕೀಳು ಮನರಂಜನೆಯನ್ನು ಇದರಿಂದ ಪಡೆಯಲು ಅಡ್ಡಿಯಿಲ್ಲ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು